ಓ ಎಸ್ .ನಂ.**376/2015**

**ಪಿಡಬ್ಲ್ಯು – 1**

ದಿನಾಂಕ **11-11-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದ**

1. ದಾವಾ ಆಸ್ತಿಯನ್ನು ನಾನು ದಿಃ17-04-2015 ರಲ್ಲಿ ಖರೀದಿ ಮಾಡಿರುತ್ತೇನೆ. ನಮಗೆ ಖರೀದಿ ಕೊಟ್ಟವರು ದಾವಾ ಆಸ್ತಿಯ ಕಬ್ಜೆಯನ್ನು ತಾವೇ ಹೊಂದಿದ್ದೇವೆ ಎಂದು ಹೇಳಿ ನಮಗೆ ಖರೀದಿ ಕೊಟ್ಟಿರುತ್ತಾರೆ. ನಾನು ಖರೀದಿ ಮಾಡುವ ಒಂದು ತಿಂಗಳ ಮುಂಚೆ ದಾವಾ ಆಸ್ತಿಗೆ ಬೇಟಿ ಕೊಟ್ಟು ನೋಡಿರುತ್ತೇನೆ. ಅಕ್ಕಪಕ್ಕದವರನ್ನು ವಿಚಾರಿಸಿದಾಗ ದಾವಾ ಆಸ್ತಿಯಲ್ಲಿ ಯಾರೂ ಕಬ್ಜೆಯಲ್ಲಿ ಇಲ್ಲ ಎಂದು ಹೇಳಿರುತ್ತಾರೆ. ಖರೀದಿ ಮಾಡಿದ 15 ದಿನಗಳ ನಂತರ ಸ್ಥಳದಲ್ಲಿ ಅಳತೆ ಮಾಡಲು ಹೋದಾಗ ಅಲ್ಲಿ ಸ್ವಲ್ಪ ಜಾಗದಲ್ಲಿ ಶೆಡ್ ಇದೆ ಎಂದು ಗೊತ್ತಾಯಿತು. ಈಗ ದಾವೆಯನ್ನು ಸಂಪೂರ್ಣ ಆಸ್ತಿಗೆ ಮಾಡಿರುತ್ತೇನೆ ಎಂದರೆ ಸರಿ. ಸಂಪೂರ್ಣ ಆಸ್ತಿಯಲ್ಲಿ ಪ್ರತಿವಾದಿಯರು ಕಬ್ಜೆಯನ್ನು ಹೊಂದಿರುತ್ತಾರೆ ಎಂದು ದಾವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯ ಸ್ವಲ್ಪ ಜಾಗೆಯಲ್ಲಿ ಶೆಡ್ ನ್ನು ಹಾಕಿರುತ್ತಾರೆ ಎಂದು ವಾದ ಪತ್ರದಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ದಾವೆಯಲ್ಲಿ ಬರೆದ ಸಂಗತಿಗಳು ಈಗ ನನಗೆ ಗೊತ್ತಿರುತ್ತವೆ. ಪ್ರತಿವಾದಿಗಳು ದಾವಾ ಆಸ್ತಿಯ ಸ್ವಲ್ಪ ಜಾಗೆಯಲ್ಲಿ ಶೆಡ್ ಹಾಕಿಕೊಂಡು ಕಬ್ಜೆಯಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಖರೀದಿ ಪತ್ರವನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ಖರೀದಿ ಪತ್ರದಲ್ಲಿ ಇಂತಹವರೇ ಇಂತಹ ಜಾಗದಲ್ಲಿ ಕಬ್ಜೆ ಇದ್ದಾರೆ ಎಂದು ನಮೂದು ಮಾಡಿಲ್ಲ. ಖರೀದಿ ಪತ್ರವನ್ನು ಏಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಅವಶ್ಯಕತೆ ಇಲ್ಲ

**ಪಿಡಬ್ಲ್ಯು – 1**

ಎಂದು ಹಾಜರು ಪಡಿಸಿಲ್ಲ ಎಂದು ಹೇಳುತ್ತಾರೆ. ಖರೀದಿ ಪತ್ರದ ಆಧಾರದ ಮೇಲೆ ನಾನು ದಾವಾ ಆಸ್ತಿಯ ಕಬ್ಜೆಯನ್ನು ಕೇಳಿದ್ದೇನೆ ಎಂದರೆ ಸರಿ. ಖರೀದಿ ಪತ್ರ ಖೊಟ್ಟಿ ಇದ್ದಿದ್ದರಿಂದ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸಿ ಟಿ ಎಸ್ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನಿಪಿ.4 ಮತ್ತು ನಿಪಿ.8 ನಾನು ವಕೀಲರ ಮುಖಾಂತರ ಪಡೆದುಕೊಂಡಿರುತ್ತೇನೆ. ಮೊದಲಿನ ವಕೀಲರ ಮುಖಾಂತರ ಪಡೆದುಕೊಂಡಿರುತ್ತೇನೆ. ಖರೀದಿ ಮಾಡಿದ ನಂತರ ಸ್ಥಳಕ್ಕೆ ಹೋದಾಗ ಅಕ್ಕ ಪಕ್ಕದವರು ಹೇಳಿದಾಗ HRC No.23/1996 , 27/1987 ಇವುಗಳ ಬಗ್ಗೆ ಗೊತ್ತಾಯಿತು. HRC No.23/1996 ಡಿಕ್ರಿ ಆಗಿದೆ, ಹಾಗೂ HRC No. 27/1987 ವಜಾ ಆಗಿದೆ ಎಂದು ಗೊತ್ತಾಯಿತು. HRC No.23/1996 ರಲ್ಲಿ ಸಿ ಟಿ ಸರ್ವೇ ನಂ.218 A/1/A/LB ಮಾತ್ರ ಇತ್ತು ಎಂದರೆ ನೆನಪಿಲ್ಲ. 90 ಫೂಟ್ ಪೂರ್ವ ಪಶ್ಚಿಮ, 55 ಫೂಟ್ ಉತ್ತರ ದಕ್ಷಿಣ ವಿಸ್ತೀರ್ಣದ ಬಗ್ಗೆ ಸದರಿ ಎಚ್ ಆರ್ ಸಿ ಯಲ್ಲಿ ದಾವಾ ಆಸ್ತಿ ಇತ್ತು ಎಂದರೆ ನೆನಪಿಲ್ಲ. ಎಚ್ ಆರ್ ಸಿ ನಂ.23/1996 ನ್ನು ಯಾರು ದಾಖಲೆ ಮಾಡಿದರು ಎಂದರೆ ಒಂದನೇ ಪ್ರತಿವಾದಿಯ ಗಂಡ ಹಾಗೂ ಎರಡರಿಂದ 4 ನೇ ಪ್ರತಿವಾದಿಯವರ ತಂದೆ ಸಲ್ಲಿಸಿರುತ್ತಾರೆ ಎಂದು ಗೊತ್ತಾಯಿತು. ಸದರಿ ದಾವೆಯನ್ನು ಬಾಡಿಗೆಯಿಂದ ಖಾಲಿ ಮಾಡಬಾರದು ಎಂದು ಸಲ್ಲಿಸಿದ್ದರು. HRC No.23/1996 ನ್ನು ಒಂದನೇ ಪ್ರತಿವಾದಿಯ ಗಂಡ ಹಾಗೂ ಎರಡರಿಂದ 4 ನೇ ಪ್ರತಿವಾದಿಯವರ ತಂದೆ ಸಲ್ಲಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. HRC No.23/1996 ನ್ನು ನನಗೆ ಖರೀದಿ ಕೊಟ್ಟವರಾದ ಅಭಿಜಿತ ತೆಂಗಿನ ಕಾಯಿಯವರು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಎಚ್ ಆರ್ ಸಿ ಯಲ್ಲಿ ಏನು ಆದೇಶ ಆಯಿತು ಎಂದರೆ ಸಾಕ್ಷಿಯು 1000 ಅಡಿ ಕಟ್ಟಿಕೊಡಬೇಕು ಮತ್ತು ಅದರ ಖರ್ಚಿನ ಬಗ್ಗೆ ಕೊಡಬೇಕು ಎಂದು ಆದೇಶ ಆಗಿರುತ್ತದೆ. ಸದರಿ HRC No.23/1996 ರಲ್ಲಿ ಅಭಿಜಿತ ತೆಂಗಿನಕಾಯಿ ಹಾಗೂ ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿಯವರು ರಾಜೀ ಮಾಡಿಕೊಂಡಿದ್ದಾರೆ

ಎಂದರೆ ಸರಿ. ರಾಜೀ ಪ್ರಕಾರ ಜಯಕುಮಾರ ಪತ್ರಾವಳಿ ದಾವಾ ಆಸ್ತಿಯ ಕಬ್ಜೆಯಲ್ಲಿ ಮುಂದುವರೆದಿದ್ದಾರೆ ಎಂದರೆ ಗೊತ್ತಿಲ್ಲ.

3. HRC No. 27/1987 ಯಾರು ಯಾರ ಮೇಲೆ ಮಾಡಿದ್ದಾರೆ ಎಂದರೆ ಸರಿಯಾಗಿ ನೆನಪಿಲ್ಲ. ಆದರೆ ಪ್ರತಿವಾದಿ ನಂ.5 ರವರು ಮಾಲಕರ ಮೇಲೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಸದರಿ ಪ್ರಕರಣದಲ್ಲಿ 5 ನೇ ಪ್ರತಿವಾದಿಯು ಬಾಡಿಗೆದಾರ ಅಲ್ಲ ಎಂದು ತೀರ್ಪು ಆಯಿತು. ದಾವಾ ಆಸ್ತಿಯ ಮೇಲೆ ಸದರಿ ಪ್ರಕರಣವನ್ನು ಹಾಕಿದ್ದರು. HRC No. 27/1987 ರಲ್ಲಿ ಅಭಿಜಿತ ಹಾಗೂ ಆತನ ಸಹೋದರರು ಪಕ್ಷಗಾರರು ಇರಲಿಲ್ಲ ಎಂದರೆ ಗೊತ್ತಿಲ್ಲ. HRC No. 27/1987 ರಲ್ಲಿ ಕೇವಲ ಮಧ್ಯಂತರ ಅರ್ಜಿಯ ಮೇಲೆ ಮಾತ್ರ ಆದೇಶ ಆಗಿದೆ ಎಂದರೆ ಗೊತ್ತಿಲ್ಲ. ಈ ದಾವೆಯಲ್ಲಿ ಅಭಿಜಿತ ಠೆಂಗಿನಕಾಯಿ ಹಾಗೂ ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿಯವರು ರಾಜೀ ಆಗಿದೆ ಎಂದು ಬರೆದುಕೊಂಡಿದ್ದೇನೆ ಎಂದರೆ ಸರಿ. ಆದರೆ ಅದು ಬಂಧನಕಾರಿ ಆಗುವುದಿಲ್ಲ ಎಂದು ಹೇಳುತ್ತಾರೆ. ರಾಜೀ ಡಿಕ್ರಿ ಪ್ರಕಾರ ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿಯವರು ಅಭಿಜಿತ ಠೆಂಗಿನಕಾಯಿ ಯವರಿಗೆ ದಾವಾ ಆಸ್ತಿಯ ಕಬ್ಜೆಯನ್ನು ಬಿಟ್ಟುಕೊಟ್ಟರು ಎಂದರೆ ಗೊತ್ತಿಲ್ಲ. ಆದರೆ ಅಭಿಜಿತ ಠೆಂಗಿನಕಾಯಿ ಯವರು ಸಾಂಗ್ಲಿಯಲ್ಲಿ ಇರುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ ಅಭಿಜಿತ ಠೆಂಗಿನಕಾಯಿ ದಾವಾ ಆಸ್ತಿಯ ಕಬ್ಜೆಯಲ್ಲಿ ಬರಲಿಲ್ಲ, ಆದರೆ ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿಯವರು ಕಬ್ಜೆಯಲ್ಲಿ ಮುಂದುವರೆದರು ಎಂದರೆ ಸರಿಯಲ್ಲ. ಪ್ರತಿವಾದಿ ನಂ.5 ಹಾಗೂ ಅಭಿಜಿತ ಠೆಂಗಿನಕಾಯಿ ಯವರ ಮಧ್ಯೆ ಯಾವುದೇ ಮಾಲೀಕತ್ವದ ಅಥವಾ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿ ಮತ್ತು ಪ್ರತಿವಾದಿ ನಂ.5 ರವರ ಮಧ್ಯೆ ಯಾವುದಾದರೂ ಬಾಡಿಗೆ ಪತ್ರ ಆದ ಬಗ್ಗೆ ನನಗೆ ಗೊತ್ತಿಲ್ಲ. ಬಾಡಿಗೆ ಕೊಟ್ಟ ಬಗ್ಗೆ ರಶೀದಿಗಳು ಇರುವುದಿಲ್ಲ. ಅಭಿಜಿತ

ಠೆಂಗಿನಕಾಯಿ 5 ನೇ ಪ್ರತಿವಾದಿಯ ಮೇಲೆ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿ 5 ನೇ ಪ್ರತಿವಾದಿಯ ಮೇಲೆ ಯಾವುದೇ ದಾವೆ ಮಾಡಿದ್ದಾರೆಯೇ ಎಂದರೆ ಗೊತ್ತಿಲ್ಲ.

4. ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿ ಯವರು ಐದನೇ ಪ್ರತಿವಾದಿಗೆ ಉಪ ಬಾಡಿಗೆದಾರರು ಎಂದು ಮಾಡಿದ ಬಗ್ಗೆ ಇದ್ದ ದಾಖಲೆಯ ಬಗ್ಗೆ ನನಗೆ ಗೊತ್ತಿಲ್ಲ. HRC No. 27/1987 ರಲ್ಲಿ ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿ ಹಾಗೂ ಐದನೇ ಪ್ರತಿವಾದಿಯ ಮಧ್ಯೆ ಯಾವುದೇ ಬಾಡಿಗೆ ದಾರರು ಎಂದು ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವೆಯ ಖಂಡಿಕೆ ನಂ.7 ರಲ್ಲಿ ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿ ಹಾಗೂ ಐದನೇ ಪ್ರತಿವಾದಿಯ ಮಧ್ಯೆ ಯಾವುದೇ ಬಾಡಿಗೆ ದಾರರು ಎಂದು ಸಂಬಂಧ ಇಲ್ಲ ಎಂದು ನಮೂದು ಮಾಡಿದ್ದೇನೆ ಎಂದರೆ ಸರಿ. ಐದನೇ ಪ್ರತಿವಾದಿಯು ಒಂದನೇ ಪ್ರತಿವಾದಿಯ ಗಂಡನಾದ ಜಯಕುಮಾರ ಪತ್ರಾವಳಿಗಾಗಲೀ ಅಥವಾ ಅಭಿಜಿತ ಠೆಂಗಿನ ಕಾಯಿಗಾಗಲೀ ಯಾವುದೇ ಬಾಡಿಗೆ ಹಣ ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ.

5. 5 ಮತ್ತು 6 ನೇ ಪ್ರತಿವಾದಿಯರು ಯಾವ ರೀತಿಯ ಕಬ್ಜೆಯನ್ನು ದಾವಾ ಆಸ್ತಿಯಲ್ಲಿ ಹೊಂದಿದ್ದಾರೆ ಎಂಬುದನ್ನು ಅಭಿಜಿತ ಠೆಂಗಿನ ಕಾಯಿ ಹೇಳಿದ್ದಾರಾ ಎಂದರೆ ಹೇಳಿಲ್ಲ. 5 ಮತ್ತು 6 ನೇ ಪ್ರತಿವಾದಿಯರು ಯಾವ ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಒಂದನೇ ಪ್ರತಿವಾದಿಯ ಗಂಡ ಲಾಜಿಸ್ಟಿಕ್ ಮತ್ತು ಪ್ಯಾಬ್ರಿಕೇಶನ ವ್ಯಾಪಾರ ಮಾಡುತ್ತಿದ್ದರು ಎಂಬುದನ್ನು ಕೇಳಿ ಪಟ್ಟಿದ್ದೆ. ದಾವಾ ಆಸ್ತಿಯ ವಿದ್ಯುತ್ ಸಂಪರ್ಕ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಯಾವುದೇ ಒಂದು ಕಂಪನಿಯ ಹೆಸರಿನಲ್ಲಿ ಇರುತ್ತದೆ, ಅದರ ಹೆಸರು ನೆನಪಿಲ್ಲ. ವಿದ್ಯುತ ಸಂಪರ್ಕ 3 phase ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದ

ನಂತರ ವಿಧ್ಯುತ್ ಸಂಪರ್ಕವನ್ನು ನನ್ನ ಹೆಸರಿಗೆ ಪಡೆದುಕೊಂಡಿದ್ದೆ ಎಂದರೆ ಸರಿ. ನನ್ನ ಹೆಸರಿನಲ್ಲಿ ವಿಧ್ಯುತ್ ಸಂಪರ್ಕ ಬದಲಾವಣೆ ಮಾಡಿಕೊಳ್ಳುವಾಗ ಐದನೇ ಪ್ರತಿವಾದಿಗೆ ತಿಳಿಸಿರುವುದಿಲ್ಲ. ವಿಧ್ಯುತ್ ಸಂಪರ್ಕ ಬದಲಾವಣೆ ಮಾಡಿಕೊಳ್ಳುವಾಗ 3 phase or 1 phase ಇತ್ತಾ ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹೆಸರಿಗೆ ವಿಧ್ಯುತ್ ಸಂಪರ್ಕ ಬದಲಾವಣೆ ಆದ ನಂತರ ಐದನೇ ಪ್ರತಿವಾದಿಯು ಅದಕ್ಕೆ ತಕರಾರು ಕೊಟ್ಟ ಎಂದರೆ ನನಗೆ ಗೊತ್ತಿಲ್ಲ. ಕೆ ಇ ಬಿ ಯವರು ನನ್ನ ಹೆಸರನ್ನು ತೆಗೆದು ಐದನೇ ಪ್ರತಿವಾದಿಯ ಹೆಸರನ್ನು ಮುಂದುವರೆಸಿದರು ಎಂದರೆ ನನಗೆ ಗೊತ್ತಿಲ್ಲ. ಈಗ ವಿಧ್ಯುತ ಸಂಪರ್ಕ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಅದೇ ಹಳೇ ಕಂಪನಿಯ ಹೆಸರಿನಲ್ಲಿ ಮುಂದುವರೆದಿದೆ ಎಂದು ಗೊತ್ತಾಯಿತು ಎಂದು ಹೇಳುತ್ತಾರೆ. ಈಗಲೂ ಸಹ ವಿಧ್ಯುತ ಸಂಪರ್ಕ ಕಟ್ಟಡಕ್ಕೆ ಇರುತ್ತದೆ ಎಂದರೆ ಸಾಕ್ಷಿಯು ಖಾಲಿ ಜಾಗ ಇರುತ್ತದೆ, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಖಾಲಿ ಜಾಗ ಇರುತ್ತದೆ ಎಂದು ತೋರಿಸಲು ಮಹಾನಗರ ಪಾಲಿಕೆಯಿಂದ ದಾಖಲೆಯನ್ನು ಪಡೆದುಕೊಂಡಿಲ್ಲ.

6. ಅಸೆಸಮೆಂಟ್ ನನ್ನ ಹೆಸರಿಗೆ ಬದಲಾವಣೆ ಮಾಡಲು ಕಾರ್ಪೊರೇಶನ್ ಗೆ ನಾನು ಅರ್ಜಿಯನ್ನು ಕೊಟ್ಟಿಲ್ಲ. ಅಸೆಸಮೆಂಟ್ ರಿಜಿಸ್ಟರ್ ಪ್ರತಿಯನ್ನು ನಾನು ಕಾರ್ಪೊರೇಶನದಿಂದ ಪಡೆದುಕೊಂಡಿಲ್ಲ. ಅಸೆಸಮೆಂಟ್ ರಿಜಿಸ್ಟರ್ ದಲ್ಲಿ ಎಷ್ಟು ಆಸ್ತಿ ಖಾಲಿ ಇರುತ್ತದೆ ಹಾಗೂ ಎಷ್ಟು ಜಾಗದಲ್ಲಿ ಕಟ್ಟಡ ಇರುತ್ತದೆ, ಯಾವ ಮಾದರಿಯ ಕಟ್ಟಡ ಇರುತ್ತದೆ ಎಂಬ ಬಗ್ಗೆ ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಸೆಸಮೆಂಟ್ ರಿಜಿಸ್ಟರ್ ದಲ್ಲಿ ಮಾಲಕರು ಯಾರು ಹಾಗೂ ಸಿ ಟಿ ಎಸ್ ನಂಬರ್ ನಮೂದು ಇರುತ್ತದೆ ಎಂದರೆ ಗೊತ್ತಿಲ್ಲ. ಟ್ಯಾಕ್ಸ ಯಾರು ತುಂಬ ಬೇಕು ಎಂಬುದನ್ನು ಸಹ ಅಸೆಸಮೆಂಟ್ ರಿಜಿಸ್ಟರ್ ದಲ್ಲಿ ನಮೂದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಎಷ್ಟು ತೆರಿಗೆ ಇರುತ್ತದೆ ಎಂಬುದು ಗೊತ್ತಿದೆಯಾ ಎಂದರೆ ನನಗೆ

ಓ ಎಸ್ .ನಂ.**376/2015**

**ಪಿಡಬ್ಲ್ಯು – 1**

ಗೊತ್ತಿಲ್ಲ. ನಾನು ದಾವಾ ಆಸ್ತಿಯ ಮಾಲೀಕರು ಇಲ್ಲದೇ ಇದ್ದಿದ್ದರಿಂದ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ. ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

ಓ ಎಸ್ .ನಂ.**376/2015**

**ಪಿಡಬ್ಲ್ಯು – 1**

ಓ ಎಸ್ .ನಂ.**376/2015**
**ಪಿಡಬ್ಲ್ಯು – 1**